# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 121 |
| ಸದಸ್ಯರ ಹೆಸರು | : | ಶ್ರೀ ಯು.ಬಿ.ವೆಂಕಟೇಶ್ |
| ಉತ್ತರಿಸುವ ದಿನಾಂಕ | : | 13/09/2022 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಯಚೂರು ಜಿಲ್ಲೆ ರಾಯಚೂರು ನಗರದಲ್ಲಿ ನಗರಸಭಾ ವ್ಯಾಪ್ತಿಯಲ್ಲಿ ಕಲುಷಿತ ನೀರನ್ನು ಕುಡಿದು ಸಾವು ನೋವುಗಳು ಸಂಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; | ರಾಯಚೂರು ಜಿಲ್ಲೆಯ ರಾಯಚೂರು ನಗರದಲ್ಲಿ ನಗರಸಭಾ ವ್ಯಾಪ್ತಿಯಲ್ಲಿ ಕಲುಷಿತ ನೀರನ್ನು ಕುಡಿದು ಸಾವು ನೋವುಗಳು ಸಂಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಕಲುಷಿತ ನೀರನ್ನು ಸರಬರಾಜು ಮಾಡಲು ಕಾರಣರಾದ ರಾಯಚೂರು ನಗರಸಭೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ ವೆಂಕಟೇಶ್‌ರವರನ್ನು ಸೇವೆಯಿಂದ ಅಮಾನತ್ತುಗೊಳಿಸಿ, ಆದೇಶಿಸಲಾಗಿದೆ. ಉಳಿದಂತೆ ರಾಯಚೂರು ನಗರಸಭೆಯಲ್ಲಿ ಕನಿಷ್ಠ ವೇತನದಡಿ (ತಾತ್ಕಾಲಿಕ ನೌಕರ) ಕಿರಿಯ ಅಭಿಯಂತರರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಕೃಷ್ಣ ರವರನ್ನು ಸೇವೆಯಿಂದ ತೆಗೆದುಹಾಕಲಾಗಿದೆ.<br><br>ರಾಯಚೂರು ನಗರಸಭೆ ವ್ಯಾಪ್ತಿಯಲ್ಲಿ ಇರುವ ಒಟ್ಟು 16 ಕುಡಿಯುವ ನೀರಿನ Ground Level service reservoir ಮತ್ತು 36 Over Head Tank ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಿ, ಬ್ಲೀಚಿಂಗ್ ಪೌಡರ್ ಮತ್ತು ಆಲಂ ಇತ್ಯಾದಿಗಳಿಂದ ನೀರನ್ನು ಶುದ್ಧೀಕರಣ ಮಾಡಲಾಗಿದೆ ಹಾಗೂ ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯಿಂದ ವಿಶೇಷವಾಗಿ ಕರ್ನಾಟಕ ನಗರ ನೀರು ಸರಬರಾಜು ಮಂಡಳಿ ರವರಿಗೆ ರಾಯಚೂರು ನಗರಕ್ಕೆ ನೀರು ಸರಬರಾಜು ಮಾಡಲು ಹೊಸದಾಗಿ ಮೋಟರ್ ಅಳವಡಿಸುವ ಯಂತ್ರಗಳಿಗೆ ರೂ.5.00 ಕೋಟಿ ಅಂದಾಜು ಪಟ್ಟಿಗೆ ಅನುಮೋದನೆ ನೀಡಲಾಗಿದೆ. ಕೆಲಸ ಪ್ರಗತಿಯಲ್ಲಿರುತ್ತದೆ.<br><br>ವಿಷಯದ ಕುರಿತು ಸರ್ಕಾರ ಕೈಗೊಂಡ ಕ್ರಮಗಳ ವಿವರವನ್ನು (ಅನುಬಂಧ-I) ರಲ್ಲಿ ಲಗತ್ತಿಸಿದೆ. |

| | | |
|---|---|---|
| ಆ) | ಕಲುಷಿತ ನೀರನ್ನು ಸೇವಿಸಿ ಮೃತಪಟ್ಟ ವ್ಯಕ್ತಿಗಳಿಗೆ ಸರ್ಕಾರ ನೀಡಿರುವ ಪರಿಹಾರದ ಮೊತ್ತವೆಷ್ಟು; ಅಸ್ವಸ್ಥಗೊಂಡ ವ್ಯಕ್ತಿಗಳಿಗೆ ನೀಡಿರುವ ಪರಿಹಾರದ ಮೊತ್ತವೆಷ್ಟು; | ರಾಯಚೂರು ನಗರದಲ್ಲಿ ಘಟನೆ ಜರುಗಿದ ನಂತರ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಮಾನ್ಯ ಲೋಕಸಭಾ ಸದಸ್ಯರು, ಮಾನ್ಯ ಶಾಸಕರು, ರಾಯಚೂರು ನಗರ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ರಾಯಚೂರುರವರ ನಿರ್ದೇಶನ ಮೇರೆಗೆ ದಿನಾಂಕ:28.05.2022 ರಿಂದ 03.06.2022 ರವರೆಗೆ ಒಟ್ಟು 03 ಜನ ಕಲುಷಿತ ನೀರನ್ನು ಕುಡಿದು ಮೃತಪಟ್ಟ ಕುಟುಂಬಗಳ ಅವಲಂಬಿತರಿಗೆ ನಗರಸಭೆ ವತಿಯಿಂದ ತಲಾ ರೂ.10.00 ಲಕ್ಷ ಪರಿಹಾರ ನೀಡಲಾಗಿದೆ.<br><br>ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ತಲಾ ರೂ.5.00 ಲಕ್ಷದಂತೆ ಒಟ್ಟು 15.00 ಲಕ್ಷಗಳ ಮೊತ್ತವನ್ನು ಪರಿಹಾರ ನೀಡಲಾಗಿದೆ.<br><br>ಸದರಿ ವಿಷಯದಲ್ಲಿ ಪರಿಶೀಲನಾ ಸಮಿತಿ ರಚಿಸಿ ಈ ಪೈಕಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ವಾಂತಿಭೇದಿ ಮರಣ ಪ್ರಕರಣಗಳ ಪರಿಶೀಲನಾ ಸಮಿತಿಯ ನಡುವಳಿಗಳ ಪ್ರಕಾರ ದಿನಾಂಕ:04.06.2022 ರಿಂದ 07.06.2022ರವರೆಗೆ ಇನ್ನು 04 ಜನ ಕಲುಷಿತ ನೀರಿನಿಂದ ಮೃತಪಟ್ಟಿದ್ದಾರೆಂದು ವರದಿಯಾಗಿದ ಪ್ರಯುಕ್ತ ಪರಿಶೀಲಿಸಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಸಲ್ಲಿಸಿದ ವರದಿ ಅನ್ವಯ ಒಟ್ಟು 04 ಜನರಲ್ಲಿ ಕೇವಲ 02 ಜನ ಈ ಕಾಯಿಲೆಯಿಂದ (Acute Gastroenteritis with Hypo Violenic and sepsis with septic shock with acute renal failure)ದಿಂದ ಮೃತಪಟ್ಟಿರುತ್ತಾರೆ.<br><br>02 ಜನ ಮೃತಪಟ್ಟ ವ್ಯಕ್ತಿಗಳು Sudden cardiac arrest due to myocardial infarction, Cardio respiratory failure with cerebrovacular accident ದಿಂದ ಮೃತಪಟ್ಟಿರುತ್ತಾರೆ ಎಂದು ಕಂಡುಬಂದಿದೆ. ಈ ಪ್ರಯುಕ್ತ ಉಳಿದ 02 ಮೃತಪಟ್ಟ ವ್ಯಕ್ತಿಗಳ ಅವಲಂಬಿತರಿಗೆ ನಿಯಮಾನುಸಾರ ಪರಿಹಾರ ಧನವನ್ನು ನೀಡುವ ಸಂಬಂಧ ದಾಖಲೆಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ರಾಯಚೂರು ಇವರಿಂದ ದೃಢೀಕರಣ ಪ್ರಮಾಣ ಪತ್ರ ಹಾಗೂ ಮೃತಪಟ್ಟವರ ಅವಲಂಬಿತರ ಬ್ಯಾಂಕ್ ಖಾತೆ ಮತ್ತು ಮೃತಪಟ್ಟಿರುವ ಮರಣ ಪ್ರಮಾಣ ಪತ್ರ, ಇತ್ಯಾದಿ ದಾಖಲೆಗಳನ್ನು ಪಡೆದು ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತಿದೆ. |
| ಇ) | ಸಾರ್ವಜನಿಕರಿಗೆ ಕಲುಷಿತ ನೀರನ್ನು ಸರಬರಾಜು ಮಾಡಲು ಕಾರಣರಾದ ಅಧಿಕಾರಿಗಳ ನೌಕರರ ವಿರುದ್ಧ ಸರ್ಕಾರಕೈಗೊಂಡಿರುವ ಕ್ರಮಗಳೇನು? | ಕಲುಷಿತ ನೀರನ್ನು ಸರಬರಾಜು ಮಾಡಲು ಕಾರಣರಾದ ರಾಯಚೂರು ನಗರಸಭೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ ವೆಂಕಟೇಶ್‌ರವರನ್ನು ಸರ್ಕಾರದ ಆದೇಶ ಸಂಖ್ಯೆ ನಅಇ 18 ಡಿಎಂಕೆ 2022 ದಿನಾಂಕ.06.06.2022 ರಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 10(1)(ಡಿ) ರಡಿ ಇಲಾಖಾ ವಿಚಾರಣೆ ಕಾಯ್ದಿರಿಸಿ, ಸೇವೆಯಿಂದ ಅಮಾನತ್ತುಗೊಳಿಸಿ, ಆದೇಶಿಸಲಾಗಿದೆ.<br><br>ರಾಯಚೂರು ನಗರಸಭೆಯಲ್ಲಿ ಕನಿಷ್ಠ ವೇತನದಡಿ(ತಾತ್ಕಾಲಿಕ ನೌಕರ) ಕಿರಿಯ ಅಭಿಯಂತರರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಕೃಷ್ಣ ರವರನ್ನು ಜಿಲ್ಲಾಧಿಕಾರಿಗಳು ರಾಯಚೂರುರವರ ಆದೇಶ ಸಂಖ್ಯೆ DCRAI-PDO/ENGG/60/2022-PD(UD) ದಿನಾಂಕ.04.06.2022 ರ ಆದೇಶದಲ್ಲಿ ಸದರಿಯವರನ್ನು ಸೇವೆಯಿಂದ ತೆಗೆದುಹಾಕಲಾಗಿದೆ. |

ಸಂಖ್ಯೆ: ನಅಇ 41 ಎಲ್‌ಸಿಕ್ಯೂ 2022

(ಎನ್. ನಾಗರಾಜು ಎಂ ಟಿ ಬಿ)
ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು.

# ಅನುಬಂಧ-1

1. ಸರ್ಕಾರದ ಆದೇಶದಂತೆ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಮತ್ತು ಮುಖ್ಯ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮಂಡಳಿ (ಕೆಯುಡಬ್ಲ್ಯೂಎಸ್ ಬಿ) ಕಲಬುರಗಿರವರು ದಿನಾಂಕ:08-06-2022 ರಂದು ಬೇಟಿ ನೀಡಿ ತನಿಖೆಯನ್ನು ನಡೆಸಿರುತ್ತಾರೆ. ತನಿಖಾ ವರದಿ ಸರ್ಕಾರಕ್ಕೆ ಸಲಿಸಲಾಗಿರುತ್ತದೆ. ಪರಿಶೀಲಿಸಲಾಗುತ್ತಿದೆ.
2. ಜಿಲ್ಲಾಧಿಕಾರಿಗಳು, ರಾಯಚೂರುರವರು ರಾಯಚೂರು ನಗರದಲ್ಲಿ ಕಲುಷಿತ ನೀರು ಸರಬರಾಜು ಪ್ರಕರಣ ಕುರಿತು ಕೈಗೊಳ್ಳಬೇಕಾದ ಮಾರ್ಗೋಪಾಯಗಳನ್ನು ಅನುಸರಿಸುವ ಬಗ್ಗೆ ಈ ಕೆಳಗಿನಂತೆ ಸಮಿತಿಗಳನ್ನು ರಚಿಸಿ ಆದೇಶಿಸಲಾಗಿದೆ.
   - GLSR ಮತ್ತು OHT ಸ್ವಚ್ಛಗೊಳಿಸುವ ಸಮಿತಿ
   - ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಮಹಿತಿ ಸಂಗ್ರಹಿಸುವ ಬಗ್ಗೆ ಸಮಿತಿ
   - Sample Collection & Testing Committee
3. ಶ್ರೀ ಜಿ.ಕುಮಾರ್ ನಾಯಕ, ಭಾ.ಆ.ಸೇ ಮಾನ್ಯ ಸರ್ಕಾರದ ಕಾರ್ಯದಶಿಗಳು, ಇಂಧನ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರಾಯಚೂರುರವರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ದಿನಾಂಕ:13.06.2022 ರಂದು ಸಭೆಯನ್ನು ನಡೆಸಿ ಅಗತ್ಯ ಕ್ರಮವಹಿಸಲು ಸೂಚನೆ ನೀಡಿರುತ್ತಾರೆ.
4. ಶ್ರೀ ಜಿ.ಕುಮಾರ್ ನಾಯಕ, ಭಾ.ಆ.ಸೇ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಇಂಧನ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರಾಯಚೂರುರವರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ದಿನಂಕ:23.06.2022 ರಂದು ಸಭೆಯನ್ನು ನಡೆಸಿ ಅಗತ್ಯ ಕ್ರಮವಹಿಸಲು ಸೂಚನೆ ನೀಡಿರುತ್ತಾರೆ.
5. ಜಿಲ್ಲಾಧಿಕಾರಿಗಳು, ರಾಯಚೂರುರವರು ಆದೇಶ ಸಂಖ್ಯೆ: Comp No.27632 File No.DCRAI-PDOADMI/144/2022 ದಿನಾಂಕ:13.06.2022ರನ್ವಯ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ:ಯುಡಿಸಿ/01/ಟಿಎಂಎಸ್/2003 ಬೆಂಗಳೂರು ದಿನಾಂಕ:03.02.2001ರ ಕ್ರಮ ಸಂಖ್ಯೆ-2 ರನ್ವಯ ರಾಯಚೂರು ನಗರಸಭೆಯ ವ್ಯಾಪ್ತಿಯಲ್ಲಿ ವಿವಿಧ ವಾರ್ಡ್‌ಗಳಲ್ಲಿ ಕಲುಷಿತ ನೀರು ಕುಡಿದು ಮರಣ ಹೊಂದಿದ 3 ಸಂಖ್ಯೆಯ ಮೃತಪಟ್ಟವರ ವಾರಸುದಾರರಿಗೆ ನಗರಸಭೆಯ ನಿಧಿಯಿಂದ ರೂ.10.00 ಲಕ್ಷ ಪರಿಹಾರ ನೀಡಲು ಅನುಮೋದನೆ ನೀಡಲಾಗಿದೆ. ಅದರಂತೆ ನಗರಸಭೆಯಿಂದ ಮೃತಟ್ಟ ವಾರಸುದಾರರಿಗೆ ಪಾವತಿಸಲಾಗಿರುತ್ತದೆ
6. ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ದಿನಾಂಕ:30.06.2022 ರಂದು ಸದರಿ 3 ಜನ ಫಲಾನುಭವಿಗಳಿಗೆ ಡಿಬಿಟಿ ಮುಖಾಂತರ ಸರ್ಕಾರದಿಂದ ತಲಾ ರೂ.5.00 ಲಕ್ಷ ಪರಿಹಾರ ಜಮಾ ಮಾಡಲಾಗಿದೆ.
7. ಶ್ರೀ ಶಂಕರ ಬಿ. ಪಾಟೀಲ ಮುನೇನಕೊಪ್ಪ, ಕೈಮಗ್ಗ ಮತ್ತು ಜವಳಿ ಇಲಾಖೆ ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ರಾಯಚೂರು ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ:14.07.2022 ರಂದು ಸಭೆ ನಡೆಸಿ ರಾಯಚೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ಅಗತ್ಯ ಕ್ರಮವಹಿಸಲು ಸೂಚನೆ ನೀಡಿರುತ್ತಾರೆ.

8. ರಾಯಚೂರು ನಗರಸಭೆ ವ್ಯಾಪ್ತಿಯಲ್ಲಿ ಇರುವ ಒಟ್ಟು ಕುಡಿಯುವ ನೀರಿನ 16 ಜಿ.ಎಸ್.ಎಲಾರ್. ಮತ್ತು 36 ಓ.ಹೆಚ್.ಟಿ. ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಲಾಗಿದೆ ಮತ್ತು ಬ್ಲೀಚಿಂಗ್ ಪೌಡರ್ ಮತ್ತು ಆಲಂ ಇತ್ಯಾದಿಗಳಿಂದ ನೀರನ್ನು ಶುದ್ಧೀಕರಣ ಮಾಡಲಾಗಿದೆ.

9. ರಾಯಚೂರು ನಗರಸಭೆ ವ್ಯಾಪ್ತಿಯಲ್ಲಿ ಇರುವ ಒಟ್ಟು 16 ಕುಡಿಯುವ ನೀರಿನ Ground Level service reservoir ಮತ್ತು 36 Over Head Tank ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಿ, ಬ್ಲೀಚಿಂಗ್ ಪೌಡರ್ ಮತ್ತು ಆಲಂ ಇತ್ಯಾದಿಗಳಿಂದ ನೀರನ್ನು ಶುದ್ಧೀಕರಣ ಮಾಡಲಾಗಿದೆ ಹಾಗೂ ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯಿಂದ ವಿಶೇಷವಾಗಿ ಕರ್ನಾಟಕ ನಗರ ನೀರು ಸರಬರಾಜು ಮಂಡಳಿ ರವರಿಗೆ ರಾಯಚೂರು ನಗರಕ್ಕೆ ನೀರು ಸರಬರಾಜು ಮಾಡಲು ಹೊಸದಾಗಿ ಮೋಟರ್ ಅಳವಡಿಸುವ ಯಂತ್ರಗಳಿಗೆ ರೂ.5.00 ಕೋಟಿ ಅಂದಾಜು ಪಟ್ಟಿಗೆ ಅನುಮೋದನೆ ನೀಡಲಾಗಿದೆ. ಕೆಲಸ ಪ್ರಗತಿಯಲ್ಲಿರುತ್ತದೆ.